**Mr. SPEAKER.**—If you peruse the answer to (*d*) you will find out that they are also anxious to take up the work as soon as it is sanctioned. The Hon'ble Member must pursue the matter not in this Assembly but outside.

12-30 P.M.

**Sri V. MASIYAPPA.**—May I ask the Government if they are going to sanction it early and give facilities to the raiyats?

**Sri H. M. CHANNABASAPPA.**—At the time we gave the answer, it was conveyed to the Chief Engineer and I will not wonder if the estimate is already sanctioned.

---

## Kanva Reservoir (Feeding Project).

*Q.*—247. **Sri V. VENKATAPPA** (Channapatna).—

Will the Government be pleased to state :—

The action taken to implement the answer given on 18th April 1955 in the last session of the Assembly to Question No. 5 in the matter of feeding Kanva Reservoir?

*A.*—**Sri H. M. CHANNABASAPPA** (Minister for Industries) [on behalf of Sri KADIDAL MANJAPPA (Minister for Revenue and Public Works)].—

The preliminary estimate for Rs. 5·5 lakhs prepared for the work is under examination.

ಶ್ರೀ ವಿ. ವೆಂಕಟಪ್ಪ.—ಈ ಅಂದಾಜು ಪರಿಶೀಲನೆಯಲ್ಲಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಯಾರ ಪರಿಶೀಲನೆಯಲ್ಲಿದೆ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದವರ ಪರಿಶೀಲನೆಯಲ್ಲಿದೆ.

ಶ್ರೀ ವಿ. ವೆಂಕಟಪ್ಪ.—ಎಷ್ಟು ವರ್ಷಗಳಿಂದ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಾಗಲೇ ಸುಮಾರು ಒಂದೆರಡು ವರ್ಷಗಳಿಂದಲೂ ಕೂಡ ಪರಿಶೀಲನೆಯಲ್ಲಿದೆ.

ಶ್ರೀ ವಿ. ವೆಂಕಟಪ್ಪ.—ಒಂದೆರಡು ವರ್ಷಗಳು ಬೇಕೇ ತೀರ್ಮಾನ ಮಾಡಬೇಕಾದರೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರೈತರು ಕಂಟ್ರಿಬ್ಯೂಷನ್ ಕೊಡುವ ವಿಷಯದಲ್ಲಿ ತಕರಾರು ಮಾಡಿದ್ದಾರೆ. ತಕರಾರು ಫೈನಲ್ ಆಗುವವರೆಗೂ ಅಂದಾಜು ಮಂಜೂರು ಮಾಡುವಹಾಗಿಲ್ಲ.

ಶ್ರೀ ವಿ. ವೆಂಕಟಪ್ಪ.—ಅಂದಾಜು ಪರಿಶೀಲನೆಯಲ್ಲದೆ ಎಂದು ಹೇಳಿದ್ದೀರಿ. ಆಂದರೆ ಮಂಜೂರು ಆಗುವ ವಿಚಾರ ಅಲ್ಲವೇ ಪರಿಶೀಲನೆಯಲ್ಲಿರುವುದು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂದಾಜು ತಯಾರಾಗಿ ಸರ್ಕಾರಕ್ಕೆ ಬಂದಿದೆ. ಅದು ಚೀಫ್ ಇಂಜನಿಯರ್ ಹತ್ತಿರವಿದೆ. ಚೀಫ್ ಇಂಜಿನಿಯರ್ ಪುನಃ ರೈತರಿಗೆ ಇಷ್ಟು ಕಂಟ್ರಿಬ್ಯೂಷನ್ ರೂಪವಾಗಿ water rate ಕೊಡಬೇಕೆಂದು ಸೂಚನೆಯನ್ನು ಕೊಟ್ಟಿದ್ದಾರೆ. ರೈತರು ಕಾನೂನು ಪ್ರಕಾರವಾಗಿ ಮುಚ್ಚಳಿಕೆ ಬರೆದುಕೊಡುವುದಕ್ಕೆ ಒಪ್ಪಿದ ತಕ್ಷಣ ಆ ಅಂದಾಜನ್ನು ಮಂಜೂರು ಮಾಡುತ್ತೇವೆ.

ಶ್ರೀ ವಿ. ವೆಂಕಟಪ್ಪ.—ರೈತರು ಕಣ್ವ ಕೆರೆಯಲ್ಲಿ ಹೆಚ್ಚಿಗೆ ನೀರು ಇಲ್ಲದೆ ತೊಂದರೆಪಡುತ್ತಿರುವುದರಿಂದ ಕಂಟ್ರಿಬ್ಯೂಷನ್ ತೆಗೆದುಕೊಳ್ಳುವುದು ಸರಿಯಲ್ಲ ಎಂದು ಇಂಜನಿಯರು ಸರ್ಕಾರಕ್ಕೆ ಬರೆದಿದ್ದಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದೇ ತಕರಾರು ಮಾಡುತ್ತಿದ್ದಾರೆಂದು ನಾನು ಹೇಳಿದ್ದು.

ಶ್ರೀ ವಿ. ವೆಂಕಟಪ್ಪ.—ಕಣ್ವಕೆರೆ ಕಟ್ಟಿ ರೈತರಿಗೆ ನೀರು ಕೊಡದೇ ಇರುವುದರಿಂದ ಅನೇಕ ಜನರು ತೊಂದರೆಪಡುತ್ತಿದ್ದಾರೆ. ಅದಕ್ಕೋಸ್ಕರ ಇದನ್ನು ಮಾಡಿಕೊಡುತ್ತಿರುವುದು. ಇದು ಹೊಸದೇನೂ ಅಲ್ಲ. ಆದ್ದರಿಂದ ರೈತರು ಕಂಟ್ರಿಬ್ಯೂಷನ್ ಪುನಃ ಕೊಡ ತಕ್ಕದ್ದು ಸರಿಯಲ್ಲ, ಸರ್ಕಾರದವರು ಅವರನ್ನು ಕೇಳ ತಕ್ಕದ್ದು ಸರಿಯಲ್ಲ ಎಂದು ಸರ್ಕಾರಕ್ಕೆ ತಿಳಿಸಿದ್ದಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಅಭಿಪ್ರಾಯದ ಮಾತು. ನೀರುಕೊಡಬೇಕೆಂಬ ಉದ್ದೇಶದಿಂದಲೇ ಕಣ್ವಕೆರೆಯನ್ನು ಕಟ್ಟಿದ್ದು. ಆದರೆ ಮಳೆ ಬಿದ್ದು ನೀರು ಬಾರದೆಹೋದರೆ, ಸರ್ಕಾರದ ತಪ್ಪಲ್ಲ.

ಶ್ರೀ ವಿ. ವೆಂಕಟಪ್ಪ.—ಸರ್ಕಾರದವರು ಸರಿಯಾಗಿ ಯೋಚನೆಮಾಡದೆ ಕಟ್ಟಿದ್ದರಿಂದ ಜನಗಳಿಗೆ ತೊಂದರೆಯಾಗಿದೆ. ಆದ್ದರಿಂದ ಸರ್ಕಾರದವರು ನೀರು ಬರುವಂತೆ ಮಾಡಬೇಕಾಗಿದೆ. ಆದಕ್ಕಾಗಿ ಪುನಃ ಕಂಟ್ರಿಬ್ಯೂಷನ್ನನ್ನು ಕೊಡಿ ಎಂದು ಕೇಳುವುದು ಸರಿಯಲ್ಲ. Existing sourcesನೇ improve ಮಾಡುತ್ತಿರುವುದರಿಂದ ಅದಕ್ಕೆ ಕಂಟ್ರಿಬ್ಯೂಷನ್ ಕೇಳುವುದು ಸರಿಯಲ್ಲ ಎಂದು ಇವರಿಗೆ ಇಂಜನಿಯರ್ ತಿಳಿಸಿದ್ದಾರೆಯೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಆ ರೀತಿ ತಿಳಿಸಿಲ್ಲ. ಜನಗಳ ಪರವಾಗಿ ಆ ರೀತಿ ಸರ್ಕಾರಕ್ಕೆ ಪ್ರಾರ್ಥನೆ ಬರುತ್ತಿದೆ. ಈ ರೀತಿ ಅನೇಕ ಕಡೆ ಕೆರೆಗಳನ್ನು ಕಟ್ಟಿ ನೀರುಬಾರದೆ ಇದ್ದರೆ, feeder channel ಗಳನ್ನು ಹಾಕಿ, ಈಗಾಗಲೇ ಸಾರ್ವಜನಿಕರಿಂದ ಹೆಚ್ಚಿನ ಕಂದಾಯವನ್ನೂ ಹೆಚ್ಚಿನ ಕಂಟ್ರಿಬ್ಯೂಷನ್ನನ್ನೂ ತೆಗೆದುಕೊಳ್ಳುತ್ತಿದೆ ಸರ್ಕಾರ.

ಶ್ರೀ ಕೆ. ಪುಟ್ಟಸ್ವಾಮಿ.—ಸರ್ಕಾರದವರು ಸರಿಯಾಗಿ ಅಂದಾಜುಮಾಡದೆ ತಪ್ಪುಲೆಖ್ಖ ಹಾಕಿ ಕೆರೆಕಟ್ಟಿ ನೀರು ಒದಗಿಸದೆ ಹೋದರೆ ಪುನಃ ಕಂಟ್ರಿಬ್ಯೂಷನ್ನನ್ನು ಜನಗಳ ಮೇಲೆ ಸರ್ಕಾರದವರು ವಿಧಿಸುವುದು ಸರಿಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಪ್ಪುಲೆಖ್ಖ ಇಲ್ಲ. ಲೆಖ್ಖ ಸರಿಯಾಗಿ ಹಾಕಿ ಮಾಡಿರುತ್ತಾರೆ. ನಿರೀಕ್ಷಿಸಿದ ಪ್ರಮಾಣದಲ್ಲಿ ಮಳೆಬೆಳೆಗಳು ಆಗದೆ ಹೋದರೆ ಹೆಚ್ಚಿಗೆ ಕಂಟ್ರಿಬ್ಯೂಷನ್ ತೆಗೆದುಕೊಳ್ಳುವುದು ಅನಿವಾರ್ಯವಾಗುತ್ತದೆ.